(ii) re : *Murder at Attalatti near Bijapur*

Sri M. S. KRISHNAN (Malleswaram).—Madam, I call the attention of the Chief Minister to the murder that took place at Attalatti near Bijapur.

Sri N. HUTCHAMASTHY GOWDA (Minister for Revenue).—Sir, On behalf of the Hon. Chief Minister, I stete as follows.

ಅಟ್ಟಲಟ್ಟಿ ಗ್ರಾಮವು ಬಿಜಾಪುರದಿಂದ ಸುಮಾರು 7 ಮೈಲಿ ದೂರದಲ್ಲಿದೆ. ದಿನಾಂಕ 30-6-1972ರಂದು ಬೆಳಗ್ಗೆ 7 ಗಂಟೆಯಿಂದ 9 ಗಂಟೆಯೊಳಗೆ ಅಟ್ಟಲಟ್ಟಿ ಗ್ರಾಮದ ಶ್ರೀ ಸಿದ್ಧರಾಯ ಶಿದ್ದಪ್ಪ ಸೊನ್ನದ ಮತ್ತು ಬೇರೆ 10 ಜನರು ಕಾನೂನು ವಿರುದ್ಧ ಸಭೆಗೂಡಿ ಶ್ರೀಯುತರಾದ (1) ನಾಗಪ್ಪ ಸಾತಪ್ಪ ಸೊನ್ನದ (2) ಹನುಮಂತ ಶಿವಪ್ಪ ಸೊನ್ನದ (3) ಅಂಬಣ್ಣ ಸಾತಪ್ಪ ಸೊನ್ನದ (4) ಸೋಮಣ್ಣ ಹೊನ್ನಪ್ಪ ಪಚ್ಚದ (5) ಸಿದ್ಧಪ್ಪ ಶಿವಪ್ಪ ಸೊನ್ನದ ಮತ್ತು (6) ಲಕ್ಷ್ಮಣ ಲಿಂಗಪ್ಪ ಬಲ್ಲದ—ಈ ಆರು ಜನರನ್ನು ಕೊಲೆ ಮಾಡಿ, ಅದೇ ಗ್ರಾಮದ ಬೇರೆ 4 ಜನರನ್ನು ಗಾಯಗೊಳಿಸಿದರು. ಅದೇ ದಿನ ಬೆಳಗ್ಗೆ ಸುಮಾರು 9 ಗಂಟೆಗೆ ಈ ಗಲಭೆಯ ಸುದ್ದಿ ಕೇಳಿದ ಬಿಜಾಪುರ ಗ್ರಾಮಾಂತರ ಪ್ರದೇಶದ ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ಚಿಕ್ಕದೊಂದು ಪೋಲೀಸು ಪಡೆಯನ್ನು ಕೂಡಿಕೊಂಡು ಆ ಗ್ರಾಮಕ್ಕೆ ಜೀಪಿನಲ್ಲಿ ಧಾವಿಸಿದರು. ಗ್ರಾಮಕ್ಕೆ ತಲುಪಿದೊಡನೆಯೇ ಮೇಲ್ಕಂಡ ವ್ಯಕ್ತಿಗಳ ಕೊಲೆಯ ವಿಚಾರ ತಿಳಿದುಕೊಂಡರು. ಈ ಬಗ್ಗೆ ಕೇಸ್ ರಿಜಿಸ್ಟರಾಗಿದೆ ತನಿಖೆ ಪ್ರಾರಂಭವಾಗಿದೆ. ಬೆಳಗಾವಿಯ ಡೆಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಬಿಜಾಪುರದ ಪೊಲೀಸ್ ಸೂಪರಿಂಟೆಂಡೆಂಟ್ ಮತ್ತು, ಸಿ.ಐ.ಡಿ. ಪೋಲೀಸ್ ಸೂಪರಿಂಟೆಂಡೆಂಟ್ ಇವರನ್ನು ಈ ಉದ್ದೇಶಕ್ಕಾಗಿ ವಿಶೇಷವಾಗಿ ನೇಮಿಸಿದೆ. ಇವರು ತಾವೇ ತನಿಖೆಯ ಮೇಲ್ವಿಚಾರಣೆ ವಹಿಸಿಕೊಂಡಿದ್ದಾರೆ. 11 ಜನ ಅಪಾದಿತರಲ್ಲಿ 9 ಜನರನ್ನು ದಸ್ತಗಿರಿ ಮಾಡಲಾಗಿದೆ; ಇಬ್ಬರು ಪರಾರಿಯಾಗಿದ್ದಾರೆ. ಪರಾರಿಯಾಗಿರುವ ಅಪಾದಿತರನ್ನು ದಸ್ತಗಿರಿ ಮಾಡಲು ಯತ್ನ ನಡೆಯುತ್ತಿದೆ. ಗಾಯಗೊಂಡ 4 ಜನರನ್ನು ಸಿವಿಲ್ ಆಸ್ಪತ್ರೆಗೆ ಸೇರಿಸಲಾಗಿದೆ. ಇವರಲ್ಲೊಬ್ಬರು ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅಪಾದಿತರನ್ನು ದಿನಾಂಕ 5-7-72ರವರೆಗೆ ಪೋಲೀಸ್ ರಕ್ಷಣೆಯಲ್ಲಿ ಇರಿಸಲಾಗಿದೆ.

ಮೃತ ನಾಗಪ್ಪ ಸಾತಪ್ಪ ಸೊನ್ನದ ಹಾಗೂ ಅವರ ಬಂಧುಗಳು ಮತ್ತು ಅಪಾದಿತ ಸಿದ್ಧರಾಯ ಸಿದ್ದಪ್ಪ ಸೊನ್ನದ ಮತ್ತಿತರರು ಇವರ ನಡುವೆ ದೀರ್ಘಕಾಲದಿಂದ ಇದ್ದ ಭೂ ವಿವಾದವೂ ಮತ್ತು 1960 ಹಾಗೂ 1962ರಲ್ಲಿ ಈಗ ಗ್ರಾಮದಲ್ಲಿ ನಡೆದ ಎರಡು ಕೊಲೆ ಪ್ರಕರಣಗಳೂ ಇವುಗಳಿಂದುಂಟಾದ ವೈಮನಸ್ಯವೇ ಈ ಕೊಲೆಗಳಿಗೆ ಕಾರಣವೆಂದು ವರದಿಯಾಗಿದೆ. 1960ನೇ ಇಸವಿಯ ಪ್ರಕರಣದಲ್ಲಿ ಅಪಾದಿತ ಸಿದ್ಧರಾಯ ಸಿದ್ಧಪ್ಪ ಸೊನ್ನದ ಮತ್ತು ಬೇರೆ 3 ಜನರಿಗೆ, ಶಿವಪ್ಪ ನಿಂಗಪ್ಪ ಸೊನ್ನದ ಇವನ ಮಾವನಾದ ಹಾಗೂ ಅಪಾದಿತ ಸಿದ್ಧರಾಯ ಸಿದ್ಧಪ್ಪ ಸೊನ್ನದ ಇವನ ಕಕ್ಕನಾದ ಶೇಗುಣಿಸಿಯ ಯಮನಪ್ಪ ಮಾದಪ್ಪನ ಕೊಲೆ ಮಾಡಿದ್ದಕ್ಕಾಗಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಅಪಾದಿತ ಸಿದ್ಧರಾಯ ಸಿದ್ಧಪ್ಪ ಸೊನ್ನದನು ಸುಮಾರು ಒಂದೂವರೆ ವರ್ಷ ಹಿಂದೆ ಜೈಲಿನಿಂದ ಬಿಡುಗಡೆ ಹೊಂದಿದ್ದನು. ಆತ ಆ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿದ್ದು ತನಗೆ ಶಿಕ್ಷೆಯಾಗುವುದಕ್ಕೆ ಕಾರಣನಾಗಿದ್ದ ಮೃತ ನಾಗಪ್ಪ ಸಾತಪ್ಪ ಸೊನ್ನದನ ಬಗ್ಗೆ ವೈರ ಸಾಧಿಸುತ್ತಿದ್ದನು. ಅಲ್ಲದೆ, ಅಪಾದಿತ ಸಿದ್ಧರಾಯ ಸಿದ್ಧಪ್ಪ ಸೊನ್ನದನಿಗೂ ಅವನ ಕಕ್ಕ ಶಿವಪ್ಪ ನಿಂಗಪ್ಪ ಸೊನ್ನದನಿಗೂ ಭೂ ವಿವಾದ ಇತ್ತು. ಈ ಭೂ ವಿವಾದದಲ್ಲಿ ಮೃತ ನಾಗಪ್ಪ ಸಾತಪ್ಪ ಸೊನ್ನದನು ಅಪಾದಿತ ಸಿದ್ಧರಾಯ ಸಿದ್ಧಪ್ಪ ಸೊನ್ನದನ ಕಕ್ಕನಿಗೆ ಬೆಂಬಲವಾಗಿದ್ದನೆಂದು ವರದಿಯಾಗಿದೆ. ಸ್ಥಳೀಯ ಪೋಲೀಸರು ಕ್ರಿಮಿನಲ್ ಪ್ರೊಸೀಜರ್ ಕೋಡಿನ 107ನೆಯ ಪ್ರಕರಣದ ಮೇರೆಗೆ ಇವರೆಡೂ ಪಂಗಡಗಳ ಮೇಲೆ ವ್ಯವಹರಣೆ ಹೂಡಿದ್ದರು. ಈ ವ್ಯವಹರಣೆ ಕೋರ್ಟಿನಲ್ಲಿ ವಿಚಾರಣೆಯಲ್ಲಿದೆ.

ಗ್ರಾಮದಲ್ಲಿ ಈಗ ಸಶಸ್ತ್ರ ಪೋಲೀಸ್ ಪಡೆಯನ್ನು ಇರಿಸಲಾಗಿದೆ. ಈಗ ಪರಿಸ್ಥಿತಿ ಶಾಂತವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತಾವು 9 ಜನಗಳನ್ನು ಅರೆಸ್ಟ್ ಮಾಡಿದ್ದೇವೆ, ಇಬ್ಬರು ಕಣ್ಮರೆಯಾಗಿದ್ದಾರೆ ಎಂದು ಹೇಳಿದಿರಿ. ಕಣ್ಮರೆಯಾಗಿರುವವರು ಯಾರು ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಯಾರು ಯಾರು ಎಂಬ ವಿವರಗಳು ಈಗ ನನ್ನಲ್ಲಿ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಿದ್ದಪ್ಪ ಶಿವಣ್ಣ ನನ್ನದ್ ಎನ್ನುವವರು ಜೈಲಿನಿಂದ ಬಿಡುಗಡೆ ಯಾಗಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲ.

ಶ್ರೀ ಸಿ. ಎನ್. ಪಾಟೀಲ್.—ಎರಡು ಪಂಗಡಗಳ ಮಧ್ಯೆ ವೈರತ್ವವಿದ್ದುದರಿಂದ ಈ ಪ್ರಕರಣ ಬೆಳೆದು ಅದರ ಸಲುವಾಗಿ 107 ನೇ ಕಲಂ ಪ್ರಕಾರ ಕಟ್ಟೆ ಹಾಕಿ ಅದು ಕೋರ್ಟಿನಲ್ಲಿ ಪೆಂಡಿಂಗ್ ಇದೆ ಎಂದು ಹೇಳಿದಿರಿ, ಈ ವಿಚಾರ ಸರ್ಕಾರಕ್ಕೆ ಮೊದಲೇ ಗೊತ್ತಿತ್ತು. ಹೀಗಿರುವಾಗ ಸರ್ಕಾರ ದವರು ಈ ಬಗ್ಗೆ ಮುಂಜಾಗರೂಕತೆ ಕ್ರಮವನ್ನು ಏತಕ್ಕೆ ಕೈಗೊಳ್ಳಲಿಲ್ಲ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವೈರತ್ವ ಎಷ್ಟೋ ಕಡೆ ಇರುತ್ತದೆ. ಅದರಿಂದ ಇಂಥಾ ಪರಿಣಾಮಗಳು ಉಂಟಾಗುತ್ತವೆ. ಅಂಥವುಗಳನ್ನು ಪ್ರತಿಯೊಂದು ಕ್ಷಣದಲ್ಲೂ ಸರ್ಕಾರ ಕಾದು ಕುಳಿತುಕೊಂಡಿರುವುದಕ್ಕಾಗುವುದಿಲ್ಲ.

ಶ್ರೀ ಜೆ. ಎಚ್. ಕಬ್ಬಾಡಿ.—ಈಗ ಎರಡು ವರ್ಷಗಳಿಂದಲೂ ಅಲ್ಲಿ ಕೊಲೆಸುಲಿಗೆಗಳು ಆಗುತ್ತಿತ್ತು. ಒಂದು ಭೀಕರ ಪರಿಸ್ಥಿತಿ ಉಂಟಾಗುತ್ತದೆ ಎಂದು ಸರ್ಕಾರಕ್ಕೆ ಗೊತ್ತಿತ್ತು. ಕೆಲವು ಕಾರಣಕ್ಕಾಗಿ ಇಂಥಾ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಅದರಿಂದ ಅಲ್ಲಿ ಪರಿಸ್ಥಿತಿ ಉಲ್ಬಣವಾಗುವುದಕ್ಕೆ ಕಾರಣವಾಯಿತು. ಅಲ್ಲಿ ಪೋಲೀಸಿನವರು ಮತ್ತು ಸರ್ಕಾರದವರು ಆ ಬಗ್ಗೆ ಅಲಕ್ಷ್ಯ ಮಾಡಿದ್ದರಿಂದ ಈ ರೀತಿ ಆಗುವುದಕ್ಕೆ ಕಾರಣವಾಯಿತು. ಆದ್ದರಿಂದ ಅದಕ್ಕೆ ತಾವು ಜವಾಬ್ದಾರರು ಹೌದೇ ಇಥವಾ ಅಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಈಗಾಗಲೇ ಸಭೆಯಮುಂದೆ ವಿನಂತಿ ಮಾಡಿದೆ. ಹೀಗೆ ಎಷ್ಟೋ ಪ್ರಸಂಗಗಳಲ್ಲಿ ಒಬ್ಬರಿಗೊಬ್ಬರಿಗೆ ವೈರತ್ವ ಇರುತ್ತದೆ. ಆದ್ದರಿಂದ ಸಾಮಾನ್ಯವಾಗಿ ಪೋಲೀಸಿನವರು ಆಯಾ ಪ್ರಸಂಗಗಳಿಗೆ ಎಷ್ಟು ಗಮನಕೊಡಬೇಕೋ ಅಷ್ಟು ಗಮನ ಕೊಟ್ಟು ಎಚ್ಚರಿಕೆಯಿಂದ ನೋಡುತ್ತಾರೆ. ಆ ರೀತಿ ಗಮನಕೊಟ್ಟಿಲ್ಲ ಎಂದು ಮಾನ್ಯ ಸದಸ್ಯರು ಸರ್ಕಾರದ ಮೇಲೆ ಹಾಗೂ ಪೋಲೀಸರ ಮೇಲೆ ಆಪಾದನೆ ಮಾಡಿರುವುದು ಅವರ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್.—ಆ ಕೊರೆ ಸಂಬಂಧದಲ್ಲಿ ಜಮೀನಿನ ವ್ಯವಹಾರಕ್ಕೆ ಸಂಬಂಧ ಪಟ್ಟದ್ದೋ, ರೈತರಿಗೆ ಸಂಬಂಧಪಟ್ಟದ್ದೋ ಅಥವಾ ಆಂತರಿಕ ಫ್ಯಾಮಿಲಿಯ ವಿಷಯಕ್ಕೆ ಸಂಬಂಧ ಪಟ್ಟದ್ದೋ ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನಿನ ಸಂಬಂಧವಾದದ್ದು.

(iii) re : *Lands allotted in Amrit Mahal Kaval of Halkudike.*

Sri **T. M. MANJUNATH** (Tiptur).—I call the attention of the Minister for Revenue to the difficulties experienced by farmers who have been allotted lands in Amrit Mahal Kaval of Halkudike.

Sri **N. HUTCHAMASTHY GOWDA.**—Sir, I state as follows :

The call attention notice relates to the disposal of land in S. No. 1 of Halkudike Amruthmahal Kaval Village, Tiptur Taluk.

S. No. 1 of Halkudike Amruthmahal Kaval is classified as 'Amruthmahal Kaval' measuring 4484 acres and 38 guntas. Out of this, Government in their order No. RD 32 LAD 62 dated 1st August 1964 have transferred an extent of 750 acres of land to the Revenue Department for cultivation purposes. The above transferred land was handed over to the Revenue Department on 28th July 1967 after observing all formalities in the matter.